# ಸರ್ಕಾರದ ಸಾಂಸ್ಕೃತಿಕ ಜವಾಬ್ದಾರಿ

ಇತಿಹಾಸದಲ್ಲಿ ಯಾವ ದೇಶದ, ಯಾವ ಕಾಲದ ರಾಜರಾದರೂ ಆಗಲಿ, ತಮ್ಮ ನಿರಂತರ ಯುದ್ಧಗಳ ನಡುವೆ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಕಾರ್ಯಗಳನ್ನು ಮರೆಯಲಿಲ್ಲ. ಹಾಗೆ ನೋಡಿದರೆ ಹಲವು ರಾಜರ ಮತ್ತು ರಾಜಮನೆತನಗಳ ಹೆಸರುಗಳು ಇಂದಿಗೂ ನೆನಪಿನಲ್ಲಿ ಉಳಿದಿರುವುದು ಅವರು ನಿರ್ಮಿಸಿದ ಸಾಂಸ್ಕೃತಿಕ ಸಂಕೇತಗಳಿಂದಲೇ; ಇಲ್ಲದಿದ್ದರೆ ಜಗತ್ತು ಅವರನ್ನು ಎಂದೋ ಮರೆತಿರುತ್ತಿತ್ತು.

ಆಳುವ ಸರ್ಕಾರದ ಆಡಳಿತದ ವ್ಯಾಪ್ತಿ ಸಂಸ್ಕೃತಿಯನ್ನೂ ಒಳಗೊಳ್ಳುತ್ತದೆ. ಒಳ್ಳೆಯ ಆಡಳಿತದ ವ್ಯಾಖ್ಯಾನದಲ್ಲಿ ಸಾಂಸ್ಕೃತಿಕ ಕ್ಷೇತ್ರದ ಮಹತ್ವ ಮತ್ತು ಬಹುತ್ವಗಳ ರಕ್ಷಣೆಗೆ ಸರ್ಕಾರ ಕೊಡುವ ಆದ್ಯತೆಯೂ ಗಣನೆಗೆ ಬರುತ್ತದೆ. ಆದರೆ ನಮ್ಮ ಕಾಲದ ಸರ್ಕಾರಗಳ ಸೂತ್ರಧಾರರಿಗೆ ಇದರ ಅರಿವು ಇಲ್ಲದಿರುವುದೇ ಒಂದು ಸಾಂಸ್ಕೃತಿಕ ದುರಂತ. ವ್ಯವಸ್ಥೆಯಲ್ಲಿ ಸಂಸ್ಕೃತಿ ಪ್ರಸಾರಕ್ಕೆಂದೇ ಇರುವ ಹಲವು ಸಂಸ್ಥೆಗಳು, ಇಲಾಖೆ ಮುಂತಾದುವು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಲು ಅಗತ್ಯವಾದ ಅನುಕೂಲಗಳನ್ನು ಮಾಡಿಕೊಡುವುದು ಸರ್ಕಾರದ ಸಾಂಸ್ಕೃತಿಕ ಜವಾಬ್ದಾರಿಯಾಗಿರುತ್ತದೆ. ಅವುಗಳಿಗೆ ಸಕಾಲದಲ್ಲಿ ನೇಮಕ ಮಾಡುವುದು ಮತ್ತು ಅನುದಾನ ನೀಡುವುದು – ಇವೆರಡೂ ಒಂದು ಸರ್ಕಾರ ತೋರಬಹುದಾದ ಅತ್ಯಂತ ಕನಿಷ್ಠ ಸಾಂಸ್ಕೃತಿಕ ಕಾಳಜಿ. ಆದರೆ ರಾಜ್ಯದಲ್ಲಿ ಇರುವ ಎಲ್ಲ ಅಕಾಡೆಮಿಗಳಿಗೆ ಸಕಾಲದಲ್ಲಿ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಲಾರದ ಸರ್ಕಾರದ ಅನಾದರ ಹಲವು ಅರ್ಥಗಳಿಗೆ ದಾರಿ ಮಾಡುತ್ತದೆ. ಯಾವ ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರ ಸೇವಾವಧಿ (ಇದನ್ನು ಅಧಿಕಾರಾವಧಿ ಅನ್ನುವುದು ಬೇಡ) ಯಾವಾಗ ಮುಗಿಯುತ್ತದೆ ಎಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ, ನಿರ್ದೇಶನಾಲಯಕ್ಕೆ ಮೊದಲೇ ತಿಳಿದಿರುತ್ತದೆ ಮತ್ತು ಹೊಸಬರ ಆಯ್ಕೆಗೆ ಶಿಫಾರಸುಗಳೂ ಸರ್ಕಾರಕ್ಕೆ ತಲುಪಿರಬಹುದು. ಅಕಾಡೆಮಿಗಳಿಗೆ ಸಕಾಲದಲ್ಲಿ ಆಯ್ಕೆ ಮಾಡಿ ಆದೇಶ ಹೊರಡಿಸಲು ಸರ್ಕಾರ ಅದೇಕೆ ಮೀನಮೇಷ ಎಣಿಸುತ್ತಿದೆ ಮತ್ತು ಅದಕ್ಕೆ ಇನ್ನಾವ ಮೂಲದಿಂದ ಆಯ್ಕೆಯ ಆದೇಶ ಬರಬೇಕು ಎಂಬುದು ಸಾಂಸ್ಕೃತಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಸಮಿತಿಗಳು, ಆಯೋಗಗಳು, ಅಕಾಡೆಮಿಗಳು, ಪ್ರಾಧಿಕಾರಗಳಿಗೆ ನೇಮಕಗಳು ತಡವಾದಷ್ಟೂ ಸರ್ಕಾರದ ಬದ್ಧತೆಯ ಕೊರತೆ ನಿಚ್ಚಳವಾಗುತ್ತದೆ.

ಭಾರತದ ವಿವಿಧ ಭಾಷೆಗಳಲ್ಲಿ ದಲಿತ ಸಾಹಿತ್ಯದ ಸ್ಥಿತಿಗತಿಯ ಅವಲೋಕನ ಮಾಡುವ ಲೇಖನಮಾಲೆಯ ಮೂರನೆಯ ಕಂತು ಈ ಸಂಚಿಕೆಯಲ್ಲಿದ್ದು, ಮರಾಠಿ ಭಾಷೆಯಲ್ಲಿ ಈಗಲೂ ಉಜ್ವಲವಾಗಿರುವ ದಲಿತ ಸಾಹಿತ್ಯದ ಪರಿಚಯ ಮಾಡಿಕೊಡುತ್ತದೆ. 'ಮಯೂರ'ದ ಈ ಪ್ರಯತ್ನ ಹಲವರ ಮೆಚ್ಚುಗೆಗೆ ಪಾತ್ರವಾಗಿದೆ. ತಮಿಳು, ತೆಲುಗು, ಬಂಗಾಲಿ, ಮಲಯಾಳಂ, ಪಂಜಾಬಿ, ಗುಜರಾಥಿ ಮುಂತಾದ ಭಾಷೆಗಳಲ್ಲಿರುವ ದಲಿತ ಸಾಹಿತ್ಯದ ಪರಿಚಯವನ್ನು ಕನ್ನಡದ ಓದುಗರಿಗೆ 'ಮಯೂರ' ಪ್ರಸ್ತುತಪಡಿಸಲಿದೆ.

–ಆರ್. ಪೂರ್ಣಿಮಾ